# ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ
# The Karnataka State Rural Development and Panchayat Raj University, Gadag

## 30–11–2020 ರಂದು ಸಾಯಂಕಾಲ 04:00 ಗಂಟೆಗೆ, 'Zoom' ಆನ್‌ಲೈನ್ ಮೀಟಿಂಗ್ ಆಪ್ ಮೂಲಕ ಜರುಗಿದ ವಿಶೇಷ ಶೈಕ್ಷಣಿಕ ಪರಿಷತ್ತಿನ ಸಭೆಯ ನಡಾವಳಿಗಳು

## Proceedings of Special Meeting of the Academic Council held on 30-11-2020 at 04:00 PM through 'Zoom' online meeting App

**MEMBERS PRESENT:**

| | |
|---|---|
| 1. Prof. Vishnukant S Chatpalli<br>Vice-Chancellor, KSRDPRU,Gadag | Chairperson |
| 2. Dr. S.S. Meenakshisundaram, IAS (Retd.)<br>Chairman, MYRADA. | Member |
| 3. Prof. C.S. Patil<br>Dean & Director, KSLU Law School<br>Karnataka State Law University, Hubballi. | Member |
| 4. Dr. N. Sivanna<br>Director I/c., Centre for Research, Innovation and Evaluation, KSRDPRU. | Member |
| 5. Prof. Suresh Kishanrao<br>Honorary Professor, KSRDPRU. | Member |
| 6. Prof. P.P. Nageshwara Rao<br>Honorary Professor, KSRDPRU. | Member |
| 7. Prof. Ajjappa Alagawadi<br>Professor (Rtd), UAS, Raichur. | Member |
| 8. Dr.D. Jeevan Kumar<br>Honorary Professor, KSRDPRU. | Member |
| 9. Smt. Neeti Sharma<br>Sr. Vice President & Co-Founder,<br>Team Lease Services Pvt. Ltd., Bengaluru | Member |
| 10. Prof Basawaraj L Lakkannavar<br>Registrar, KSRDPRU, Gadag | Member-Secretary |

**Leave of Absence:**

1. Director, Abdul Nazeer Sab SIRD Mysuru — Member
2. Prof. Gopal Naik, Dean, Economics & Social Science, IIM, Bengaluru. — Member

ಪ್ರಾರಂಭದಲ್ಲಿ ಶ್ರೀ ಬಸವರಾಜ ಲಕ್ಕಣ್ಣವರ, ಕುಲಸಚಿವರು, ಎಲ್ಲ ಸದಸ್ಯರನ್ನು ವಿಶೇಷ ಶೈಕ್ಷಣಿಕ ಪರಿಷತ್ತಿನ ಸಭೆಗೆ ವೈಯಕ್ತಿಕವಾಗಿ, ಕುಲಪತಿಗಳ ಹಾಗೂ ವಿಶ್ವವಿದ್ಯಾಲಯದ ಪರವಾಗಿ ಆತ್ಮೀಯವಾಗಿ ಸ್ವಾಗತಿಸಿದರು. ನಂತರ ಕಾರ್ಯಸೂಚಿಯನ್ನು ಕೈಗೆತ್ತಿಗೊಳ್ಳಲಾಯಿತು.

**ವಿಷಯ ಸಂಖ್ಯೆ 1: ವಿಶ್ವವಿದ್ಯಾಲಯದಲ್ಲಿ ಜರುಗುತ್ತಿರುವ ಶೈಕ್ಷಣಿಕ, ಸಂಶೋದನೆ, ತರಬೇತಿ ಹಾಗೂ ವಿಸ್ತರಣಾ ಚಟುವಟಿಕೆಗಳನ್ನು Power Point Presentation ಮೂಲಕ ವಿವರಿಸುವುದು.**

ಮೊದಲನೇಯದಾಗಿ ಕುಲಪತಿಗಳು ಮಾತನಾಡುತ್ತ ಐದನೇ ಅಕಾಡೆಮಿಕ್ ಕೌನ್ಸಿಲ್ ಸಭೆಯಲ್ಲಿ ಚರ್ಚಿಸಿದಂತೆ, ಮುಂದಿನ ಕೆಲವು ವರ್ಷಗಳಲ್ಲಿ ಈ ವಿಶ್ವವಿದ್ಯಾನಿಲಯವನ್ನು ಬೆಳೆಸಲು ಹೇಗೆ ಮುಂದುವರಿಯಬೇಕೆಂದು ಕುರಿತು ನಾವು ಚರ್ಚೆಯನ್ನು ನಡೆಸಬೇಕೆಂದು ಸದಸ್ಯರು ಸಲಹೆ ನೀಡಿದ್ದರು ಅದರಂತೆ ನಾವು ಒಂದು ವರ್ಷ, ಮೂರು ವರ್ಷ, ಐದು ವರ್ಷ ಹಾಗೂ ಹತ್ತು ವರ್ಷಗಳನ್ನು ಮೀರಿ ನಮ್ಮ ಯೋಜನೆಗಳನ್ನು ರೂಪಿಸಲು ಮತ್ತು ಕಾರ್ಯರೂಪಕ್ಕೆ ತರಲು ಸದಸ್ಯರ ಸಲಹೆ ಪಡೆಯಲು ಈ ಸಭೆಯನ್ನು ಇರಿಸಲಾಗಿದೆ ಎಂದು ತಿಳಿಸಿದರು. ಒಂದು ಕಾರ್ಯಸೂಚಿಯನ್ನು ಹೊರತುಪಡಿಸಿ ಬೇರೆ ಯಾವುದೇ ನಿರ್ದಿಷ್ಟ ಕಾರ್ಯಸೂಚಿ ಇಲ್ಲ. ಫೆಬ್ರುವರಿ ಮಾರ್ಚನಡುವೆ ಈ ವಿಶ್ವವಿದ್ಯಾಲನಿಯದ ಮೊದಲ ಘಟಿಕೋತ್ಸವವನ್ನು ಹೊಂದುವ ಸಾಧ್ಯತೆಯಿದ್ದು, ಈ ಕಾರ್ಯಸೂಚಿಯನ್ನು ಶೈಕ್ಷಣಿಕ ಪರಿಷತ್ತಿನ ಸದಸ್ಯರ ಅನುಮೊದನೆಗಾಗಿ ಇರಿಸಲಾಗಿದೆ.

ಮುಂದುವರೆದು ಕುಲಪತಿ ಸ್ವಾಗತಾರ್ಹ ಟಿಪ್ಪಣಿಯಲ್ಲಿ, ಕಳೆದ 6 ತಿಂಗಳ ಹಿಂದೆ ನಾನು ಅಧಿಕಾರ ವಹಿಸಿಕೊಂಡಿದ್ದರಿಂದ ವಿಶ್ವವಿದ್ಯಾಲಯದಲ್ಲಿ ಜರುಗುತ್ತಿರುವ ಹಾಗೂ ಮುಂದೆ ಜರುಗುವ ಶೈಕ್ಷಣಿಕ, ಸಂಶೋದನೆ, ತರಬೇತಿ ಹಾಗೂ ವಿಸ್ತರಣಾ ಚಟುವಟಿಕೆಗಳ ಸಂಬಂಧಿತವಾಗಿ ಮೈಲಿಗಲ್ಲನ್ನು ರೂಪಿಸಲಾಗಿದೆ ಹಾಗೂ ಆರು ತಿಂಗಳಲ್ಲಿ ಮಾಡಿದ ಚಟುವಟಿಕೆಗಳನ್ನು ಸವಿಸ್ತಾರವಾಗಿ Power Point Presentation ಮೂಲಕ ವರದಿಯನ್ನು ಪ್ರಸ್ತುತ ಪಡಿಸಿದರು. 5 ಕಲಿಕಾ ಕೇಂದ್ರಗಳನ್ನೊಳಗೊಂಡ 10 ಪ್ರೋಗ್ರಾಮ್‌ಗಳನ್ನು ಪ್ರಾರಂಭಿಸಲಾಗಿದೆ. ಇದರ ಜೊತೆಗೆ ಮೊದಲ 6 ತಿಂಗಳಲ್ಲಿ ಮೂರು ಸ್ನಾತಕೋತ್ತರ ಡಿಪ್ಲೊಮಾ

ಕಾರ್ಯಕ್ರಮಗಳನ್ನು ಪ್ರಾರಂಭಿಸಲು ಯೋಜಿಸಲಾಗಿದೆ. ವಿಶ್ವವಿದ್ಯಾಲಯದ ದೃಷ್ಠಿ ಮತ್ತು ಗುರಿಯನ್ನು ಸಾಧಿಸಲು ARTE (Academic, Research, Traning and Extension) ಎಂಬ ಸಂಕ್ಷಿಪ್ತ ರೂಪವನ್ನು ನೀಡಲಾಗಿದೆ ಎಂದು ತಿಳಿಸುತ್ತಾ, ಈಗಾಗಲೇ ವಿಶ್ವವಿದ್ಯಾಲಯದಲ್ಲಿ ಇದಕ್ಕೆ ಸಂಬಂಧಪಟ್ಟಂತೆ ವಿವಿಧ ಚಟುವಟಿಕೆಗಳು ನಡಿಯುತ್ತಿದೆ. ದೇಶದಲ್ಲಿ ಒಟ್ಟು 1,000 ವಿಶ್ವವಿದ್ಯಾಲಯಗಳಿದ್ದು, ನಮ್ಮ ವಿಶ್ವವಿದ್ಯಾಲಯವು ಒಂದು ವಿಶಿಷ್ಟ ಪಾತ್ರವನ್ನು ಪಡೆದುಕೊಂಡಿದೆ ಹಾಗೂ ಪ್ರಮುಖವಾಗಿ ವಿಶ್ವವಿದ್ಯಾಲಯವು ವಿದ್ಯಾರ್ಥಿ ಕೇಂದ್ರಿತ ಹಾಗೂ ಸಮುದಾಯ ಕೇಂದ್ರಿತ ಎಂಬ ಎರಡು ಪರಿಕಲ್ಪನೆ ಅಡಿ ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಪ್ರತಿ ವರ್ಷವು ವಿದ್ಯಾರ್ಥಿಗಳ ದಾಖಲಾತಿಯಲ್ಲೂ ಸಹ ಹೆಚ್ಚುತ್ತಿದೆ. IQAC ಘಟಕವನ್ನು ಸ್ಥಾಪಿಸಲಾಗಿದೆ. ಹಾಗೂ ಮುಂದಿನ 3 ವರ್ಷದ ಮೈಲಿಗಲ್ಲಿನಲ್ಲಿ ಸಾಧಿಸಬಹುದಾದ ವಿಷಯಗಳನ್ನು ವಿವರಿಸಿದರು. ಈಗಾಗಲೆ ಡಾ.ಪಿ. ನಾಗೇಶ್ವರ ರಾವ್ ಅವರು 10 ವರ್ಷದ ಯೋಜನೆಯನ್ನು ತಿಳಿಸಿದ್ದಾರೆಂದು ವಿವರಿಸಿದರು. ಈಗಾಗಲೇ ಸಾಕಷ್ಟು ಸಂಸ್ಥೆಗಳೊಂದಿಗೆ ಒಪ್ಪಂದ ಮತ್ತು ಸಹಯೋಗವನ್ನು ಮಾಡಿಕೊಂಡಿದ್ದು ಮುಂದಿನ ಮೈಲಿಗಲ್ಲಿನಲ್ಲಿ ಜೂನ್ 2021 ಶೈಕ್ಷಣಿಕ ವರ್ಷದಲ್ಲಿ MYRADA , GRAM, CSIR ಹಾಗೂ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಯ, ಬೆಂಗಳೂರು ಇವರೊಂದಿಗೆ ಒಪ್ಪಂದ ಮತ್ತು ಸಹಯೋಗವನ್ನು ಮಾಡಿಕೊಳ್ಳವ ಪ್ರಕ್ರಿಯೆ ನಡೆಯಿತ್ತಿದೆ ಎಂದು ತಿಳಿಸಿದರು.

ಮುಂದುವರೆದು ಸಂಶೋಧನೆ, ಅನ್ವೇಷಣೆ ಮತ್ತು ಮೌಲ್ಯಮಾಪನಾ ಕೇಂದ್ರದಿಂದ ಅಂತರಶಿಕ್ಷಣ ಸಂಶೋಧನೆಯನ್ನು ಉತ್ತೇಜಿಸಲು ಕಲಾಂ ಸಂಶೋಧನಾ ವೇದಿಕೆ ಸ್ಥಾಪಿಸಲಾಗಿದೆ, ಜೈವಿಕ ವೈವಿಧ್ಯ ಉದ್ಯಾನದಲ್ಲಿ ಜೈವಿಕ ಇಂಧನ ಯೋಜನೆಯನ್ನು ಪ್ರಾರಂಭಿಸಲಾಗಿದೆ ಹಾಗೂ ನಾವೀನ್ಯತೆ ಮತ್ತು ಮೌಲ್ಯಮಾಪನ ಚಟುವಟಿಕೆಗಳು ಇನ್ನೂ ಪ್ರಾರಂಭವಾಗಬೇಕಿದೆ ಎಂದು ತಿಳಿಸುತ್ತಾ, ಮುಂದಿನ 2ನೇ ಮತ್ತು 3ನೇ ಮೈಲಿಗಲ್ಲಿನಲ್ಲಿ ನಡೆಯಬೇಕಾದ ಯೋಜನೆಗಳ ಬಗ್ಗೆ ವಿವರಿಸಿದರು.

ಕುಲಪತಿಗಳು ಮುಂದುವರೆದು ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣಾ ಕೇಂದ್ರದ ಮೂಲಕ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ ಕುರಿತು ತರಬೇತಿ ನೀಡಲಾಗಿದೆ. ATI ಮತ್ತು NIDM ಸಹಯೋಗದೊಂದಿಗೆ "ಪಂಚಾಯತ್ ಮಟ್ಟದ ವಿಪತ್ತು ನಿರ್ವಹಣಾ ಯೋಜನೆ ಮತ್ತು ವಿಪತ್ತು ಕಡಿಮೆ ಮಾಡುವುದರ ಕುರಿತು ತರಬೇತಿ ನೀಡಲಾಗಿದೆ. ಹಾಗೂ 3 ಪುಸ್ತಕಗಳನ್ನು ಪ್ರಕಟಿಸಲಾಗಿದೆ. ನಂತರದಲ್ಲಿ ಮುಂದಿನ 2 ವರ್ಷದಲ್ಲಿ ನಡೆಯಬೇಕಾದ ಯೋಜನೆಗಳ ಬಗ್ಗೆ ತಿಳಿಸಿದರು. ಅವುಗಳೆಂದರೆ, ವಿವಿಧ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳಿಗೆ ತರಬೇತಿ ಕಾರ್ಯಕ್ರಮಗಳು, ಪುಸ್ತಕಗಳು ಮತ್ತು Newsletter ಪ್ರಕಟಣೆಗಳು, ಸಂಬಂಧಿತ ಮತ್ತು ಪ್ರಸ್ತುತ ವಿಷಯಗಳ ಕುರಿತು ಸಮಾವೇಶಗಳು, ಕಾರ್ಯಾಗಾರ ಮತ್ತು

ಸೆಮಿನಾರ್‌ಗಳ ಆಯೋಜನೆ ಮತ್ತು PMKY, CMKY, DKVY ಮುಂತಾದವುಗಳೊಂದಿಗೆ ಕೌಶಲ್ಯ ಅಭಿವೃದ್ಧಿ ಚಟುವಟಿಕೆಗಳನ್ನು ಪ್ರಾರಂಭಿಸುವುದು.

ನಂತರದಲ್ಲಿ ವಿಸ್ತರಣಾ ಚಟುವಟಿಕೆಗಳು, ಮಾನವ ಸಂಪನ್ಮೂಲ ಹಣಕಾಸು ಮತ್ತು ಭೌತಿಕ ಮೂಲಸೌಕರ್ಯ ಹಾಗೂ ಶೈಕ್ಷಣಿಕ ವಿಷಯಕ್ಕೆ ಸಂಬಂಧಿತ ಇತರೆ ಚಟುವಟಿಕೆಗಳ ಬಗ್ಗೆ ವಿವರಿಸಿದರು.

**ವಿಷಯ ಸಂಖ್ಯೆ 2: ಸಭೆಯಲ್ಲಿ ಹಾಜರಿದ್ದ ಸದಸ್ಯರ ಚರ್ಚೆ & ಸಲಹೆಗಳು.**

- ಮೊದಲನೇಯದಾಗಿ ಶ್ರೀ. ಸಿ. ಎಸ್. ಪಾಟೀಲರವರು ಈ ವಿಶ್ವವಿದ್ಯಾಲಯವು ಶೈಕ್ಷಣಿಕ, ಸಂಶೋಧನೆ ಹಾಗೂ ತರಬೇತಿಯನ್ನು ಕೊಡುವಂತಹ ವಿಶ್ವವಿದ್ಯಾಲಯವಾಗಿದ್ದು, ಶೈಕ್ಷಣಿಕವಾಗಿ ಗುಣಮಟ್ಟದ ಶಿಕ್ಷಣ ಗುಣಮಟ್ಟದ ಉಪನ್ಯಾಸಗಳು ಹಾಗೂ ಒಳ್ಳೆಯ ಗ್ರಂಥಾಲಯ ವ್ಯವಸ್ಥೆಯನ್ನು ಹೊಂದಿದೆ. PMKY ಅಡಿ ಮಾನ್ಯತೆ ಪಡೆಯಬೇಕಾದರೆ ಸಂಶೋಧನೆ ಹಾಗೂ ತರಬೇತಿಯಲ್ಲಿ ಹೆಚ್ಚಿನ ಗಮನ ಹರಿಸಬೇಕಾಗುತ್ತದೆ. ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಶಾಲೆಯಿಂದ ಚುನಾಯಿತ ಗ್ರಾಮ ಪಂಚಾಯತ್ ಸದಸ್ಯರುಗಳಿಗೆ ಪ್ರಚಲಿತ ವಿಷಯಗಳಿಗೆ ಸಂಬಂಧಿಸಿದಂತೆ ಹಲವು ತರಬೇತಿಗಳನ್ನು ನೀಡುವುದರಿಂದ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಬೆಳವಣಿಗೆಯನ್ನು ಕಾಣಬಹುದು ಎಂದು ತಿಳಿಸಿದರು.
- ನಂತರದಲ್ಲಿ ಶ್ರೀ. ಎಸ್. ಎಸ್. ಮೀನಾಕ್ಷಿಸುಂದರಂ ಅವರು ಶುಭಾಶಯಗಳನ್ನು ತಿಳಿಸುತ್ತಾ, ARTE ಎಂಬ ಸಂಕ್ಷಿಪ್ತರೂಪಕ್ಕೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ನಮ್ಮದು ವಿಶ್ವವಿದ್ಯಾಲಯವು ಮುಖ್ಯವಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯವಾಗಿರುವದರಿಂದ ಗ್ರಾಮೀಣಾಭಿವೃದ್ಧಿಯಲ್ಲಿ ಕೃಷಿಯು ಮತ್ತು ಕೌಶಲ್ಯ ಅಭಿವೃದ್ಧಿಯು ಒಂದು ಮಹತ್ವದ ಭಾಗವಾಗಿದ್ದು, ಅದರಲ್ಲಿ ಹೆಚ್ಚು ಲಾಭಗಳಿಸಬೇಕಾದರೆ ಧೀರ್ಘಾವಧಿಯವರೆಗೆ ಕಾಯಬೇಕಗುತ್ತದೆ, ಅದ್ದರಿಂದ ನಾವು ರೈತರ ಉತ್ಪಾದಕ ಸಂಸ್ಥೆಗಳ ಸಹಕಾರದೊಂದಿಗೆ ಮಾರುಕಟ್ಟೆಯಲ್ಲಿ ರೈತರಿಗೆ ಒಳ್ಳೆಯ ಬೆಲೆಗೆ ಮಾರಾಟ ಮಾಡಿಸಲು ಸಹಕಾರಿಯಾಗುತ್ತದೆ ಎಂದು ತಿಳಿಸುತ್ತಾ, ಇದನ್ನು ಸಾಧಿಸಲು ನಾವು ಕೆಲವೊಂದು ಸಂಸ್ಥೆಗಳೊಂದಿಗೆ ಒಡಂಬಡಿಕೆ ಮತ್ತು ಒಪ್ಪಂದವನ್ನು ಮಾಡಿಕೊಳ್ಳಬಹುದು. ಇದು ರೈತರಿಗೆ ತರಬೇತಿ ಕೊಡುವುದು ಮತ್ತು ರೈತರ ಕೌಶಲ್ಯ ಅಭಿವೃದ್ಧಿ ಪಡಿಸಲು ಸಹಾಯ ಮಾಡುತ್ತದೆ ಹಾಗೂ ಕೃಷಿ ವಿಶ್ವವಿದ್ಯಾಲಯದ ಜೊತೆಗೆ ಒಡಂಬಡಿಕೆ ಮತ್ತು ಒಪ್ಪಂದವನ್ನು ಮಾಡಿಕೊಳ್ಳಬೇಕೆಂದು

ತಿಳಿಸಿದರು. ಪ್ರಧಾನ ಮಂತ್ರಿಯವರು ಪ್ರಸ್ತಾಪಿಸಿದ ರೈತರ ಆದಾಯವನ್ನು ದ್ವಿಗುಣಗೊಳಿಸುವ ಪರಿಕಲ್ಪನೆಯು ಸಾಕಾರಗೊಳಿಸಬಹುದೆಂದು ತಿಳಿಸಿದರು. ಮುಂದುವರೆದು ಕೌಶಲ್ಯ ಅಭಿವೃದ್ಧಿಯು ವಿಷಯಕ್ಕೆ ಬಂದಾಗ ಮೊದಲು ಕೆಲ ವಿಷಯಗಳ ಮೌಲ್ಯಮಾಪನ ಮಾಡಬೇಕಾಗುವುದು ಅವುಗಳೆಂದರೆ, ನಮ್ಮಲ್ಲಿರುವ ಕೌಶಲ್ಯಗಳು ಯಾವವು, ಯಾವುದರ ಅವಶ್ಯಕತೆ ಇದೆ ಹಾಗೂ ಇವು ಎರಡರ ನಡುವೆ ಏನು ವ್ಯತ್ಯಾಸವಿದೆ ಮತ್ತು ಈ ವ್ಯತ್ಯಾಸವನ್ನು ಯಾರು ಸರಿಪಡಿಸುತ್ತಾರೆ ಎಂದು ತಿಳಿದುಕೊಂಡು ಇದನ್ನು ಸಂಶೋಧನೆಯ ಮೂಲಕ ನಾವು ತಿಳಿದಿಕೊಂಡರೆ ಕೌಶಲ್ಯ ಅಭಿವೃದ್ಧಿಗೊಳಿಸಲು ಸಹಾಯಕಾರಿ ಯಾಗುತ್ತದೆ. ನಾವು ಕೆಲವೊಂದು ಕಡೆ ಕೆಲಸ ಮಾಡಿದ್ದು ಕಿರಿಯರಲ್ಲಿ ಹೊಸ ವಿಚಾರಗಳು ಕೌಶಲ್ಯಗಳನ್ನು ನಾವು ಕಂಡಿದ್ದು ಇದು ಹಿರಿಯರ ನಡುವೆ ವ್ಯತ್ಯಾಸವಿರುವುದನ್ನು ತೋರಿಸುತ್ತದೆ. ಆದ್ದರಿಂದ ಹಿರಿಯ ಉದ್ಯೋಗಿಗಳಿಗೆ ಅವಶ್ಯವಿರುವ ಕೌಶಲ್ಯಗಳ ಮೇಲೆ ತರಬೇತಿ ನೀಡಬೇಕು ಎಂದು ತಿಳಿಸಿದರು. ಇನ್ನು ಪಂಚಾಯತ್ ರಾಜ್ ವಿಷಯಕ್ಕೆ ಬಂದಾಗ ಈಗಾಗಲೇ ನೀವು SIRD ಮತ್ತು ಕರ್ನಾಟಕ ಸರ್ಕಾರದೊಂದಿಗೆ ಕೆಲವು ಒಳ್ಳೆಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಗಮನಕ್ಕೆ ಬಂದಿದೆ. ಪಂಚಾಯತ್ ಸದಸ್ಯರಿಗೆ ತರಬೇತಿಗಳನ್ನು ನೀಡಿದರೆ ವ್ಯವಸ್ಥೆಯಲ್ಲಿ ಉತ್ತಮ ಬೆಳವಣಿಗೆಯನ್ನು ಕಾಣಬಹುದು ಮತ್ತು ಪ್ರತಿ 5 ವರ್ಷಕ್ಕೊಮ್ಮೆ ಸದಸ್ಯರು ಬದಲಾಗುವದರಿಂದ ಅವರಿಗೆ ಅವಶ್ಯವಿರುವ ವಿಷಯಗಳ ಮೇಲೆ ತರಬೇತಿ ನೀಡಬೇಕಾಗುತ್ತದೆ ಎಂದು ತಿಳಿಸಿದರು.

- ನಂತರದಲ್ಲಿ ಡಾ. ಸುರೇಶ ಕಿಶನ್‌ರಾವ್ ಅವರು ಕೆಳಕಂಡ ವಿಷಯಗಳ ಕುರಿತು ಮಾತನಾಡಿದರು. ಮೊದಲನೇಯದಾಗಿ: ಸಹಕಾರ ನಾವು 2021 ಅನ್ನುವಷ್ವರಲ್ಲಿ ಅಂದುಕೊಂಡ ಕಾರ್ಯಗಳನ್ನು ಪೂರ್ಣಮಾಡಬೇಕಾದರೆ ಕೆಲವು ಸರ್ಕಾರಿ ಇಲಾಖೆಗಳ ಸಹಕಾರ ನಮಗೆ ಬೇಕಾಗುವುದು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆಯುಕ್ತರನ್ನು ಭೇಟಿ ಮಾಡಿ ಅವರ ಸಹಕಾರರದೊಂದಿಗೆ ನಾವು ಮುಂದುವರೆದರೆ ನಮ್ಮ ವಿದ್ಯಾರ್ಥಿಗಳಿಗೆ ಒಳ್ಳೆಯ ಅವಕಾಶಗಳು ಸಿಗುತ್ತದೆ ಎಂದು ತಿಳಿಸಿದರು. ಎರಡನೇಯದಾಗಿ ಸಮುದಾಯ, ವಿಶ್ವವಿದ್ಯಾಲಯವು ಈಗಾಗಲೇ ಸಮುದಾಯ ಕೇಂದ್ರಿತ ಚಟುವಟಿಕೆಗಳನ್ನು ಹಮ್ಮಿಕೊಂಡಿದೆ ಇದರ ಜೋತೆಗೆ ಗದಗದಲ್ಲಿರುವ ಬಡಜನರಿಗೆ ನಮ್ಮ ವಿಶ್ವವಿದ್ಯಾಲಯದ ಕ್ಯಾಂಪಸ್ನಲ್ಲಿ 1 ಅಥವಾ 2 ತಾಸಗಳಲ್ಲಿ ಅವರಿಗೆ ಜೀವನ ಚಕ್ರದ ವಿಧಾನವನ್ನು ತಿಳಿಸುವುದು. ಮೂರನೇಯದಾಗಿ: ನಾವು ಈಗಾಗಲೇ ಈ ವಿಷಯದ ಬಗ್ಗೆ ಯೋಜನೆ ಮಾಡಿದ್ದೇವು ಆದರೆ ಅದನ್ನು ಕಾರ್ಯರೂಪಕ್ಕೆ ತರಲಾಗಿಲ್ಲ. ಆದ್ದರಿಂದ ಈಗಿರುವ ಪ್ರತಿಯೊಬ್ಬ ವಿದ್ಯಾರ್ಥಿಯು ಹಳ್ಳಿಗಳಲ್ಲಿರುವ 20 ಕುಟುಂಬಗಳನ್ನು ಮತ್ತು ನಗರದಲ್ಲಿರುವ 20

ಕುಟುಂಬಗಳನ್ನು ಆಯ್ಕೆಮಾಡಿ ಅಲ್ಲಿರುವ ವ್ಯತ್ಯಾಸವನ್ನು ತಿಳಿದುಕೊಂಡು ಅವರಿಗೆ ಜೀವನ ಶೈಲಿಯ ಚಕ್ರದ ವಿಧಾನವನ್ನು ತಿಳಿಸಬೇಕು ಎಂದು ತಿಳಿಸಿದರು.

ನಾಲ್ಕನೇಯದಾಗಿ, ಈಗಾಗಲೇ ನಾವು ಕೆಲವು ತರಬೇತಿ ಕಾರ್ಯಗಳನ್ನು ಆರೋಗ್ಯ ನಿರೀಕ್ಷಕರಿಗೆ ತರಬೇತಿಯನ್ನು ನೀಡುತ್ತಿದ್ದು, ಪ್ಯಾರಾ ಮೆಡಿಕಲ್ ಎಂಬ ಪದವಿ ಕೋರ್ಸ ಬಗ್ಗೆ ಚರ್ಚಿಸಿ ಯೋಜನೆ ಮಾಡಿದ್ದಾದರೆ ಮುಂದಿನ ವರ್ಷದಿಂದ ಅಂದರೆ 2021-22 ಶೈಕ್ಷಣಿಕ ವರ್ಷದಿಂದ ಕೇಲವು ಪದವಿ ಕೋರ್ಸಗಳನ್ನು ಪ್ರಾರಂಭ ಮಾಡಬಹುದು ತಿಳಿಸಿದರು. ಮುಂದುವರೆದು ರೂರಲ್ ಇಮೆರ್ಶನ್‌ನಲ್ಲಿ ನಮ್ಮ ವಿದ್ಯಾರ್ಥಿಗಳು ಕೇವಲ ಅಂಕಿಅಂಶಗಳನ್ನು ಸಂಗ್ರಹಿಸುತ್ತಿದ್ದು ಇದು ಒಂದು ಬಾಗವಹಿಸುವ ಕಲಿಕೆಯ ಚಟುವಟಿಕೆಯಾಗಬೇಕೆಂದು ತಿಳಿಸುತ್ತಾ, 6 ತಿಂಗಳು ಹಾಗೂ ಮುಂದಿನ 1 ಮತ್ತು 2 ವರ್ಷದಲ್ಲಿ ಕೈಗೊಂಡ ಯೋಜನೆಗಳು ತಿಳಿಸಿದ ಸಮಯದಲ್ಲಿ ಮುಗಿಸಿ ನಿರೀಕ್ಷಿತ ಫಲಿತಾಂಶವನ್ನು ನೀಡಬೇಕೆಂದು ತಿಳಿಸಿದರು. ಹಾಗೂ ವಿಶ್ವವಿದ್ಯಾಲಯದಲ್ಲಿರುವ ಉಪನ್ಯಾಸಕರುಗಳು ಭೋದಿಸುವುದರ ಜೊತೆಗೆ ವಿಶ್ವವಿದ್ಯಾಲಯದಲ್ಲಿ ನಡೆಯುವ ಪ್ರತಿಯೊಂದು ಕಾರ್ಯಗಳಲ್ಲಿ ಭಾಗವಹಿಸಬೇಕೆಂದು ತಿಳಿಸಿದರು. ಅದರ ಜೊತೆಗೆ ಕೆಲವು Research Paper ಗಳನ್ನು ಪ್ರಕಟಣೆ ಮಾಡಬೇಕು.ಮುಂದಿನ 6 ತಿಂಗಳಲ್ಲಿ ವಿಶ್ವವಿದ್ಯಾಲಯದ ಎಲ್ಲ ವಿದ್ಯಾರ್ಥಿಗಳ ಹಾಗೂ ಸಿಬ್ಬಂದಿಗಳ ಆರೋಗ್ಯ ಮಟ್ಟವನ್ನು ಪರೀಕ್ಷಿಸಬೇಕೆಂದು ತಿಳಿಸಿದರು.

- ಡಾ. ಪಿ.ಪಿ. ನಾಗೇಶ್ವರ್ ರಾವ್ ಅವರು ವಿಶ್ವವಿದ್ಯಾಲಯದ ದೃಷ್ಟಿ ಮತ್ತು ಗುರಿಯನ್ನು ಮೈಲಿಗಲ್ಲುಗಳನ್ನಾಗಿ ಪರಿವರ್ತಿಸದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಗ್ರಾಮೀಣಾಭಿವೃದ್ಧಿಯಲ್ಲಿ ಯೋಜನಾ ಘಟಕಗಳು ಕೆಳಗಿನಿಂದ ಮೇಲಕ್ಕೆ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸವುದು ಮೇಲಿನಿಂದ ಕೆಳಕ್ಕೆಈ ಎರಡು ವಿಷಯಗಳಲ್ಲಿ ನಮ್ಮ ವಿಶ್ವವಿದ್ಯಾಲಯವು ಬಹಳ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಈಗಾಗಲೇ ನಮ್ಮ ವಿಶ್ವವಿದ್ಯಾಲಯದಲ್ಲಿ MSc(GI), FST, Data Analytics, MBA, MCom ಹಲವು ತಾಂತ್ರಿಕ ಕೋರ್ಸಗಳಿದ್ದು, ಇವುಗಳು ಯೋಜನೆ ರೂಪಿಸಲು ಹಾಗೂ ಅವುಗಳನ್ನು ಅನುಷ್ಠಾನಗೊಳಿಸಲು ಸಹಾಯಕಾರಿಯಾಗುತ್ತದೆ ಎಂದು ತಿಳಿಸಿದರು. ಶ್ರೀ. ಎಚ್. ಕೆ. ಪಾಟೀಲ ಅವರು ನವೆಂಬರ್ 11, 2020 ರಂದು ತಿಳಿಸಿದಹಾಗೆ ನಮ್ಮ ವಿಶ್ವವಿದ್ಯಾಲಯವು ಗದಗನಲ್ಲಿ ಇದ್ದುಕೊಂಡು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಬೆಳೆಯಬೇಕು ಎಂಬ ಪರಿಕಲ್ಪನೆಯನ್ನು ಹೊಂದಿದೆ ಅದರಂತೆ ವಿಶ್ವವಿದ್ಯಾಲಯವು ಬೆಳವಣಿಗೆಯಾಗಲು ದೀರ್ಘಾವಧಿಯ ಯೋಜನೆಗಳನ್ನು ಹಮ್ಮಿಕೊಳ್ಳಬೇಕೆಂದು ತಿಳಿಸಿದರು. ಮುಂದುವರೆದು ಶಿಕ್ಷಣ. ಉದ್ಯಮಶೀಲತೆ ಹಾಗೂ ಭೌತಿಕ ಮತ್ತು ಸಾಮಾಜಿಕ ಮೂಲಸೌಕರ್ಯಗಳು ಗ್ರಾಮೀಣಾಭಿವೃದ್ಧಿಯಲ್ಲಿ ಬಹಳ ಮುಖ್ಯವಾದ ಅಂಶಗಳು

ಆದ್ದರಿಂದ ARTE (Academic, Research, Traning and Extension) ಎಂಬ ವಿಶ್ವವಿದ್ಯಾಲಯದ ಗುರಿ ಮತ್ತು ದೃಷ್ಟಿಯು ಗ್ರಾಮೀಣಾಭಿವೃದ್ಧಿಗೆ ಪೂರಕವಾಗಿದೆ ಎಂದು ತಿಳಿಸಿದರು.

ವಿಶ್ವವಿದ್ಯಾಲಯದ ನೂತನ ಕ್ಯಾಂಪಸ್ನಲ್ಲಿ ಮಣ್ಣು ಮತ್ತು ನೀರಿನ ಹಾಗೂ ರಾಸಾಯನಿಕ ವರ್ಧಿತ ಪ್ರಯೋಗಾಲಯವನ್ನು ಸ್ಥಾಪಿಸಬೇಕಾಗಿದೆ. ಮಣ್ಣಿನ ಗುಣಮಟ್ಟ, ಫಲವತ್ತತೆ, ಪೋಷಕಾಂಶಗಳು ಮತ್ತು ಇಂಗಾಲದ ಅಂಶವನ್ನು ಹೊರತುಪಡಿಸಿದರೆ ಕೃಷಿಯಲ್ಲಿ ಲಾಭವನ್ನು ಗಳಿಸಲು ಸಾಧ್ಯವಿಲ್ಲ. ಆದ್ದರಿಂದ ಈ ಪ್ರಯೋಗಾಲಯವನ್ನು ಬಳಸಿಕೊಂಡು ರೈತರಿಗೆ ಸಲಹೆಯನ್ನು ಕೊಡುವುದು ಮತ್ತು ಮಣ್ಣಿನ ಗುಣಮಟ್ಟವನ್ನು ಪರಿಕ್ಷಿಸುವುದು ಮಾಡುವುದರಿಂದ ವಿಶ್ವವಿದ್ಯಾಲಯಕ್ಕೆ ಆದಾಯಬರುವುದು ಎಂದು ತಿಳಿಸಿದರು. ಮುಂದುವರೆದು ವಿಶ್ವವಿದ್ಯಾಲಯವು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್‌ಗೆ ಕೆಲಸ ಮಾಡುತ್ತಿದ್ದು ಸುಸ್ಥಿರ, ಪರಿಸರ ಸ್ನೇಹಿ, ಕೃಷಿ ವ್ಯವಸ್ಥೆಯನ್ನು ಒಳಗೊಂಡ ಒಂದು ಮಾದರಿ ಗ್ರಾಮವನ್ನು ನಿರ್ಮಾಣಮಾಡಬೇಕು. ಹಾಗೂ ವಿಶ್ವವಿದ್ಯಾಲಯವು ಸಂಕ್ಷಿಪ್ತವಾಗಿ ಸಮಗ್ರ ಕೃಷಿ ಮಾಡಿ ರೈತರಿಗೆ ಮಾದರಿಯಾಗಬೇಕು ಎಂದು ತಿಳಿಸಿದರು.
ಮುಂದುವರೆದು ಮೂರನೇಯ ವಿಷಯದಲ್ಲಿ, ಇಸ್ರೋ ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣಾ ಕೇಂದ್ರಗಳಲ್ಲಿ ಒಂದಾಗಿದೆ. ಅವರು ನೈಸರ್ಗಿಕ ಸಂಪನ್ಮೂಲಗಳ ಬಗ್ಗೆ ದೊಡ್ಡ ಮಾಹಿತಿಯನ್ನು ಹೊಂದಿದ್ದಾರೆ. ಆದ್ದರಿಂದ ಇಸ್ರೋದ ರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರ ಮತ್ತು ರಿಮೋಟ್ ಸೆನ್ಸಿಂಗ್ ಅಭಿವೃದ್ಧಿ ಕೇಂದ್ರ ಹಾಗೂ KSRSAT ಯ ಜೊತೆಗೆ ಮಾಡಿಕೊಳ್ಳುವದರಿಂದ ಉಪಯೋಗವಾಗಬಹುದು. ಕರ್ನಾಟಕ ಸರ್ಕಾರದಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಬಂಧಿತ ಕಾರ್ಯಕ್ರಮಗಳಿವೆ ಉದಾಹರಣೆಗೆ, ಗ್ರಾಮೀಣ ಕುಡಿಯುವ ನೀರು ನೈರ್ಮಲ್ಯೀಕರಣ, ಸ್ವಚ್ಛ್ ಭಾರತ ಮಿಷನ್, ಜಲ ಜೀವನ ಮಿಷನ್, ಮನೆ ಮನೆಗೆ ಗಂಗೆ ಕಾರ್ಯಕ್ರಮ, ಪ್ರಧಾನ ಮಂತ್ರಿ ಗ್ರಾಮ್ ಸಡಕ್ ಯೋಜನೆ. ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಪ್ರಧಾನ ಮಂತ್ರಿ ಗ್ರಾಮೀಣ ಆವಾಸ್ ಯೋಜನೆ, ದೀನ ದಯಾಳ ಯೋಜನೆ ಮುಂತಾದವುಗಳನ್ನು ನಾವು ಗಮನದಲ್ಲಿಟ್ಟುಕೊಂಡು ನಮ್ಮ ಚಟುವಟಿಕೆಗಳನ್ನು ರೂಪಿಸಿಕೊಳ್ಳಬೇಕು ಎಂದು ತಿಳಿಸಿದರು.

- ಡಾ. ಎನ್. ಶಿವಣ್ಣ ಅವರು ARTE (Academic, Research, Traning and Extension) ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು. ಈ ವಿಸ್ತರಣಾ ಚಟುವಟಿಕೆಗಳನ್ನು ನಾವು ತರಬೇತಿ

Vaipa.

ಮತ್ತು ಸಂಶೋಧನೆಯಾಗಿ ತೆಗೆದುಕೊಳ್ಳಬಹುದು ಮತ್ತು ಅಧ್ಯಾಪಕರು ವಿಷಯದ ಬಗ್ಗೆ ನವೀಕರಣಗಳನ್ನು ಹೊಂದುವುದು ಅವಶ್ಯವಾಗಿರುವದರಿಂದ ಮತ್ತು ಬೋಧನಾ ವಿಭಾಗದಲ್ಲಿ ಸಂಶೋಧನಾ ವಿಧಾನವನ್ನು ಸೇರಿಸಲು Faculty Development Program ಅನ್ನು ಹಮ್ಮಿಕೊಳ್ಳಬೇಕು ಎಂದು ತಿಳಿಸಿದರು.

ಮುಂದುವರೆದು, ಡಿಸೆಂಬರ್ 22 ರಂದು ಚುನಾವಣೆಗಳು ಬರುತ್ತಿರುವದರಿಂದ, ಚುನಾವಣೆಯಲ್ಲಿ ಹೇಗೆ ಸ್ಪರ್ಧೆ ನಡೆಯಬೇಕು ಎಂಬುದರ ಕುರಿತು ಪೂರ್ವ ಚುನಾವಣಾ ತರಬೇತಿಯನ್ನು ನಡೆಸವುದರಿಂದ ಯುವ ಮತ್ತು ಅರ್ಹರನ್ನು ಆಯ್ಕೆ ಮಾಡಬಹುದು. ಹಾಗೂ NGO ಗಳನ್ನು ತರಬೇತಿ ಕೊಡಲು ಬಳಸಿಕೊಳ್ಳಬಹುದು ಮತ್ತು Student development Program ನ್ನು ಕೂಡ ಮಾಡಬೇಕಾಗುತ್ತದೆ ಎಂದು ಅಭಿಪ್ರಾಯ ವಕ್ತಪಡಿಸಿದರು.

- ಶ್ರೀಮತಿ. ನೀತಿ ಶರ್ಮಾ ರವರು PMKVY, DDU ಮುಂತಾದ ಕಾರ್ಯಕ್ರಮಗಳನ್ನು ಮರುವಿನ್ಯಾಸಗೋಳಿಸಿ ಈ ಕಾರ್ಯಕ್ರಮಗಳನ್ನು ವಿಶ್ವವಿದ್ಯಾಲಯದಲ್ಲಿ ಅಳವಡಿಸಿಕೊಳ್ಳಬೇಕಾಗಿದೆ ಹಾಗೂ ವಿಶ್ವವಿದ್ಯಾಲಯದ ಕ್ಯಾಂಪಸ್‌ನೊಳಗೆ ಗ್ರಾಮೀಣ BPO ರಚಿಸುವದರಿಂದ ಕೆಲವು ಉದ್ಯೋಗಗಳನ್ನು ಸೃಷ್ಟಿಯಾಗುವದರೊಂದಿಗೆ ರೈತರಿಗೆ ಸಹಕಾರಿಯಾಗುತ್ತದೆ. ಮತ್ತು ಅಧ್ಯಾಪಕರ ಉನ್ನತೀಕರಣವು, ಬೋಧಕವರ್ಗದ ಜ್ಞಾನವನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ ಎಂದು ತಿಳಿಸಿದರು.
- ಡಾ. ಜೀವನ್‌ಕುಮಾರ ಅವರು ರಚನಾತ್ಮಕ ಕಾರ್ಯಕ್ರಮಗಳ ಬಗ್ಗೆ ಗಾಂಧಿಜೀಯವರಿಗೆ ಇರುವ ಆಲೋಚನೆಗಳನ್ನು ಅಧ್ಯಾಪಕರಿಗೆ ಮತ್ತು ಇತರರಿಗೆ ತಿಳಿಸಬೇಕು. ಹಾಗೂ ಸುಸ್ಥಿರ ಅಂಶಗಳನ್ನೊಳಗೊಂಡ Poly Crop ನ ಪರಿಕಲ್ಪನೆ, ಸಹಕಾರಿ ಕೃಷಿಯ ಮಹತ್ವವನ್ನು ಮತ್ತು ಹಾನಿಕಾರಕ ರಾಸಾಯನಿಕಗಳ ಬಗ್ಗೆ ರೈತರಿಗೆ ತಿಳಿಸುವುದು. ವಿದ್ಯಾರ್ಥಿಗಳ ನಿಯೋಜನೆಗಳಿಗೆ ಹೆಚ್ಚು ಒತ್ತು ನೀಡಬೇಕು ಮತ್ತು ಹೆಚ್ಚಿನ ಸಂಖ್ಯೆಯ ಉದ್ಯೋಗದಾತರಿಗೆ ನಾವು ಆಹ್ವಾನಿಸಬೇಕು ಎಂದು ತಿಳಿಸಿದರು.
- ನಂತರದಲ್ಲಿ ಶ್ರೀ. ಅಜ್ಜಣ್ಣ ಅಳಗವಾಡಿಯವರು, ವಿದ್ಯಾರ್ಥಿಗಳ ಪ್ರವೇಶಕ್ಕೆ, ಹೊರಗಿನ ಧನಸಹಾಯ ಯೋಜನೆಗೆ ಹಾಗೂ ಕೌಶಲ್ಯ ಅಭಿವೃದ್ಧಿಯ ಸಂಬಂಧಿತ ಕೋರ್ಸಗಳನ್ನು ಪ್ರಾರಂಭಿಸಲು ಹೆಚ್ಚಿನ ಮಹತ್ವ ನೀಡಬೇಕು , ವಿವಿಧ ಸಂಘ ಸಂಸ್ಥೆಗಳೊಂದಿಗೆ ಹಾಗೂ ಉದ್ಯಮದವರ ಜೊತೆಗೆ ಸಹಯೋಗ ಮಾಡಿಕೊಳ್ಳಬೇಕಾಗಿದೆ. ಬೋಧನೆಯಲ್ಲಿ ಪರಿವರ್ತನೆಯ ಬದಲಾವಣೆಗಳನ್ನು ತರಲು ಕೃತಕ ಬುದ್ಧಿಮತ್ತೆಯನ್ನು ಬಳಸಿಕೊಳ್ಳಬೇಕು ಎಂದು ತಿಳಿಸಿದರು.

**ವಿಷಯ ಸಂಖ್ಯೆ 3: ವಿಶ್ವವಿದ್ಯಾಲಯದಲ್ಲಿ 1 ನೇ ಘಟಿಕೋತ್ಸವವನ್ನು ಜರುಗಿಸುವ ಕುರಿತು.**

ಮಾನ್ಯ ಕುಲಪತಿಗಳು ಎಲ್ಲ ಸದಸ್ಯರ ಸಲಹೆ ಸೂಚನೆಗಳನ್ನು ಪಡೆದುಕೊಂಡು ಅವುಗಳನ್ನು ಕಾರ್ಯಗತಗೊಳಿಸಲು ಎಲ್ಲರ ಸಹಾಯ ಮತ್ತು ಸಹಕಾರ ನೀಡಬೇಕೆಂದು ಕೋರಿದರು ಹಾಗೂ ವಿಶ್ವವಿದ್ಯಾಲಯದಲ್ಲಿ ಫೆಬ್ರವರಿ ಅಥವಾ ಮಾರ್ಚ್ ತಿಂಗಳಲ್ಲಿ ಘಟಿಕೋತ್ಸವವನ್ನು ಜರುಗಿಸಲು ಯೋಜನೆ ರೂಪಿಸಲಾಗುತ್ತಿರುವದಾಗಿ ತಿಳಿಸಿದರು. ಇದಕ್ಕೆ ಎಲ್ಲ ಸದಸ್ಯರು ಸಹಮತಿ ವ್ಯಕ್ತಪಡಿಸಿ ಅನುಮೋದಿಸಿದರು.

ಕೊನೆಯಲ್ಲಿ ಸಮಿತಿಯ ಎಲ್ಲಾ ಸದಸ್ಯರಿಗೆ ಹಾಗೂ ಅಧ್ಯಕ್ಷರಿಗೆ, ಕುಲಸಚಿವರು ವಂದನಾರ್ಪಣೆ ಮಾಡುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಕುಲಸಚಿವರು** | **ಕುಲಪತಿಗಳು**